## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ ರವರು ಇವರು ನಿಯಮ 72 ರಡಿಯಲ್ಲಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ

ಪ್ರಶ್ನೆ:

ಕೆ.ಟಿ.ಸಿ.ಪಿ. 1961ರ ಕಲಂ 5 ರಿಂದ 13ರವರೆಗಿನ ಅವಕಾಶದಂತೆ ಶಾಸನಬದ್ಧ ಮಹಾಯೋಜನೆ (ಮಾಸ್ಟರ್ ಪ್ಲಾನ್) ತಯಾರಿಸಲಾಗಿರುತ್ತದೆ. ಅದರಂತೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿಯೂ ಮಹಾಯೋಜನೆ ತಯಾರಿಸಲಾಗಿದ್ದು, ಸದರಿ ಮಹಾಯೋಜನೆಯಲ್ಲಿ Proposed land use map ಹಾಗೂ ವಲಯ ನಿಯಮಗಳಲ್ಲಿ (Z.R.) ವಸತಿ/ ವಾಣಿಜ್ಯ ಇತರೆ ಚಟುವಟಿಕೆಗಳಿಗೆ ಅವಶ್ಯಕತೆಗಳಿಗನುಗುಣವಾಗಿ ಹಾಗೂ ಯೋಜನಾ ಬೆಳವಣಿಗೆ ದೃಷ್ಟಿಯಿಂದ ಯೋಜನೆಯ ನಗರ ತತ್ವಗಳಿಗುಣವಾಗಿ ಅವಕಾಶ ಕಲ್ಪಿಸಲಾಗಿರುತ್ತದೆ. ಅದರ ಅವಕಾಶದಂತೆ ವಿವಿಧ ಉದ್ದೇಶಗಳಿಗೆ ನಿಗಧಿಯಾದ ನಿವೇಶನಗಳನ್ನು ಅದೇ ಉದ್ದೇಶಕ್ಕೆ ಬಳಸಿಕೊಳ್ಳಲು ಸಾರ್ವಜನಿಕರಿಗೆ ಹಕ್ಕು ಇರುತ್ತದೆ. ಆದರೆ ಇತ್ತೀಚೆಗೆ ಘನ ಸರ್ವೋಚ್ಚ ನ್ಯಾಯಾಲಯದಿಂದ ಸಿವಿಲ್ ಅಫೀಲು ಸಂಖ್ಯೆ: 3600/2011 M/s Vinayaka H.B.C.S. V/s State of Karnataka ಪ್ರಕರಣದಲ್ಲಿ ದಿನಾಂಕ: 26-8-2019ರಂದು ನೀಡಿರುವ ಆದೇಶದಲ್ಲಿ ಬಡಾವಣೆ ನಕ್ಷೆಯಲ್ಲಿ ರಚಿತವಾಗಿರುವ ನಿವೇಶನಗಳು ವಸತಿ ಎಂದು ನಿಗದಿಯಾಗಿದ್ದಲ್ಲಿ ಅದೇ ಉದ್ದೇಶಕ್ಕೆ ಬಳಸಬೇಕೆಂದು, ಮಹಾಯೋಜನೆ ಮತ್ತು ವಲಯ ನಿಯಮಗಳಲ್ಲಿ ಇತರೆ ಉದ್ದೇಶಕ್ಕೆ ನಿಗದಿಯಾಗಿದ್ದರೂ ಅದನ್ನು ಸರ್ಕಾರವು ದಿನಾಂಕ: 4-12-2019ರಂದು ಸುತ್ತೋಲೆ ಹೊರಡಿಸಿ, ಪಾಲಿಸುವಂತೆ ಸೂಚಿಸಿದೆ. ಇದರಿಂದಾಗಿ ಸಾರ್ವಜನಿಕರಿಗೆ ಅವರು ಮಹಾಯೋಜನೆಯಲ್ಲಿ ನಿಗದಿಯಾಗಿದ್ದ ಉದ್ದೇಶಕ್ಕೆ ಬಳಸದಂತೆ ಅವರ ಶಾಸನಬದ್ಧ ಹಕ್ಕನ್ನು ಮೊಟಕುಗೊಳಿಸಿದಂತಾಗುತ್ತದೆ.

ಕಾಯ್ದೆ, ಅವಕಾಶಗಳು, ಮಹಾಯೋಜನೆಯ ಉದ್ದೇಶಗಳನ್ನು ಘನ ಸರ್ವೋಚ್ಚ ನ್ಯಾಯಾಲಯದ ಅವಗಾಹನೆಗೆ ತಂದು, ಸದರಿ ಆದೇಶವನ್ನು ಮಾರ್ಪಾಡುಗೊಳಿಸುವಂತೆ ನ್ಯಾಯಾಲಯಕ್ಕೆ ಸೂಕ್ತವಾದ ಮಾಹಿತಿಯನ್ನು ನೀಡದೆ ಇರುವುದರಿಂದ ಬಂದ ಸದರಿ ತೀರ್ಪಿನಿಂದ ಸಾರ್ವಜನಿಕರಿಗೆ ತುಂಬಾ ತೊಂದರೆ ಉಂಟಾಗಿ, ಮಹಾಯೋಜನೆಯ ಉದ್ದೇಶಗಳನ್ನು ಅನುಷ್ಠಾನಗೊಳಿಸಲು ತುಂಬಾ ಕಷ್ಟಸಾಧ್ಯವಾಗಿದೆ. ಇದರಿಂದಾಗಿ ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿ ವಾಸಿಸುವ ಜನರ ಸೌಕರ್ಯಗಳಿಗೆ ತುಂಬಾ ಅಡ್ಡಿ ಉಂಟಾಗಿರುವ ಗಂಭೀರ ಸಮಸ್ಯೆ ಕುರಿತು.

*****

ಉತ್ತರ:

ಮಹಾಯೋಜನೆ ಮತ್ತು ವಲಯ ನಿಯಮಾವಳಿಗಳನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರಡಿಯಲ್ಲಿ ನಿಯಮಾನುಸಾರ ಸಿದ್ಧಪಡಿಸಲಾಗುತ್ತಿದ್ದು, ಶಾಸನಬದ್ಧ ದಾಖಲಾತಿಯಾಗಿರುತ್ತದೆ. ಮಹಾಯೋಜನೆಯಲ್ಲಿ ಯೋಜನಾ ಬದ್ಧವಾಗಿ ವಿವಿಧ ಉದ್ದೇಶಗಳಿಗೆ ಭೂ ಉಪಯೋಗವನ್ನು ನಿಗಧಿಪಡಿಸಲಾಗುತ್ತದೆ ಮತ್ತು ವಲಯ ನಿಯಮಾವಳಿಗಳಲ್ಲಿ ವಿವಿಧ ಉದ್ದೇಶಗಳಲ್ಲಿ ಅನುಮತಿಸಬಹುದಾದ ಪ್ರಮುಖ ಉಪಯೋಗಗಳು ಮತ್ತು ಪೂರಕ ಉಪಯೋಗಗಳನ್ನು ಅನುಮತಿಸಲು ಅವಕಾಶ ಕಲ್ಪಿಸಲಾಗಿರುತ್ತದೆ. ಉದಾಹರಣೆಗೆ:- ವಸತಿ ಉಪಯೋಗದಲ್ಲಿ ಅಂಗನವಾಡಿ ಶಾಲೆ ಮತ್ತು ನಿವೇಶನದಾರರಿಗೆ ಉಪಯೋಗವಾಗುವಂತಹ ದಿನಸಿ ಅಂಗಡಿಗೆ ಅನುಮತಿಸಲು ಅವಕಾಶ ಕಲ್ಪಿಸಲಾಗಿರುತ್ತದೆ. ಮುಂದುವರೆದು, ಮಹಾಯೋಜನೆಯನ್ನು ಪರಿಷ್ಕರಿಸುವ ಸಮಯದಲ್ಲಿ ಕಾಲ ಕ್ರಮೇಣ ಬಂದಿರುವ ಬೆಳವಣಿಗೆಗಳನ್ನು ಪರಿಗಣಿಸಿ ಮಹಾಯೋಜನೆಯನ್ನು ಪರಿಷ್ಕರಿಸಲಾಗುತ್ತದೆ. ಉದಾಹರಣೆಗೆ:- ಹಲವಾರು ವರ್ಷಗಳ ಹಿಂದೆ ಕೈಗಾರಿಕಾ ಉದ್ದೇಶಕ್ಕೆ ನಿಗಧಿಪಡಿಸಲಾಗಿರುವ ಪ್ರದೇಶದಲ್ಲಿ ಕೈಗಾರಿಕಾ ಚಟುವಟಿಕೆಗಳು ಸಂಪೂರ್ಣವಾಗಿ ನಿಂತುಹೋಗಿ (dead industries) ವಸತಿ

ಬೆಳವಣಿಗೆಗಳು ಬಂದಿರುವುದರಿಂದ ಕೈಗಾರಿಕೆಯಿಂದ ವಸತಿ ಉದ್ದೇಶಕ್ಕೆ ನಿಗಧಿಪಡಿಸಿ ಪರಿಷ್ಕರಿಸಲಾಗುತ್ತದೆ.

ಮಾನ್ಯ ಸರ್ವೋಚ್ಚ ನ್ಯಾಯಾಲಯದ ಅಪೀಲು ಸಂಖ್ಯೆ 3600/2011 ಮೆ|| ವಿನಾಯಕ ಹೌಸ್ ಬಿಲ್ಡಿಂಗ್ ಕೋಆಪರೇಟಿವ್ ಸೋಸೈಟಿ ವಿರುದ್ಧ ಕರ್ನಾಟಕ ರಾಜ್ಯ ಸರ್ಕಾರ ಪ್ರಕರಣದಲ್ಲಿ ದಿನಾಂಕ 26.08.2019ರಂದು ನೀಡಿರುವ ತೀರ್ಪಿನಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವನ್ನೊಳಗೊಂಡಂತೆ ಕರ್ನಾಟಕ ರಾಜ್ಯದ ಎಲ್ಲಾ ಯೋಜನಾ/ಅಭಿವೃದ್ಧಿ ಪ್ರಾಧಿಕಾರಗಳ ವ್ಯಾಪ್ತಿಯಲ್ಲಿ ಅನುಮೋದನೆಗೊಂಡ ಯೋಜನೆ / ಬಡಾವಣೆಗಳಲ್ಲಿ ನಿರ್ದಿಷ್ಟ ಉದ್ದೇಶಕ್ಕೆ ಮೀಸಲಿಟ್ಟ ಭೂಮಿಯನ್ನು ಅನ್ಯತಾ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆಗೆ ಅನುಮತಿಸುವಂತಿಲ್ಲವೆಂದು ನಿರ್ದೇಶನ ನೀಡಲಾಗಿರುತ್ತದೆ. ಆದ್ದರಿಂದ, ಸರ್ಕಾರದ ಸುತ್ತೋಲೆ ಸಂಖ್ಯೆ ನಅಇ 85 ಬಿಎಂಆರ್ 2019, ದಿನಾಂಕ 04.12.2019 ರಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪಿನಲ್ಲಿ ನೀಡಿರುವ ನಿರ್ದೇಶನಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಹಾಗೂ ಪ್ರಾಧಿಕಾರದ ಯೋಜನೆಗಳು/ ಅನುಮೋದಿತ ಬಡಾವಣೆಗಳಲ್ಲಿನ ನಿವೇಶನಗಳನ್ನು ಇತರೆ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಬಾರದೆಂದು ನಿರ್ದೇಶನ ನೀಡಲಾಗಿರುತ್ತದೆ.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಕೈಗಾರಿಕಾ ಪ್ರದೇಶವು ಕಾಲಕ್ರಮೇಣ ವಾಣಿಜ್ಯ ಪ್ರದೇಶವಾಗಿ ಬದಲಾವಣೆಗೊಂಡಿರುತ್ತದೆ. ಅದರಂತೆ ಮಹಾಯೋಜನೆಯನ್ನು ಪರಿಷ್ಕರಿಸುವ ಸಮಯದಲ್ಲಿ ಮೂಲತಃ ಕೈಗಾರಿಕಾ ಬಡಾವಣೆ ಇರುವ ಪ್ರದೇಶವನ್ನು ವಾಣಿಜ್ಯ ಉದ್ದೇಶಕ್ಕೆ ನಿಗಧಿಪಡಿಸಲಾಗಿರುತ್ತದೆ. ಮೈಸೂರು ಮಹಾನಗರ ಪಾಲಿಕೆಯು ಮಹಾಯೋಜನೆಯಂತೆ ಭೂ ಉಪಯೋಗವನ್ನು ಪರಿಗಣಿಸಬೇಕೇ ಅಥವಾ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ಪರಿಗಣಿಸಬೇಕೆಂಬುದರ ಬಗ್ಗೆ ಪ್ರಾಧಿಕಾರವು ಸರ್ಕಾರದ ಮಾರ್ಗದರ್ಶನ ಕೋರಿರುತ್ತದೆ.

ಅದರಂತೆ, ಪ್ರಾಧಿಕಾರದ ಪ್ರಸ್ತಾವನೆ ಮತ್ತು ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶ ಹಾಗೂ ಇತರೆ ಕೆಲವೊಂದು ಅಂಶಗಳ ಬಗ್ಗೆ ಕಾನೂನು ಇಲಾಖೆ ಮತ್ತು ಮಾನ್ಯ ಅಡ್ವೋಕೇಟ್ ಜನರಲ್ ರವರ ಅಭಿಪ್ರಾಯ ಕೋರಲಾಗಿರುತ್ತದೆ. ಸದರಿ ಪ್ರಸ್ತಾವನೆಯು ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿದ್ದು, ಮಾನ್ಯ ಅಡ್ವೋಕೇಟ್ ಜನರಲ್ ರವರಿಂದ ಅಭಿಪ್ರಾಯ ಪಡೆದು ನಿಯಮಾನುಸಾರ ಪರಿಶೀಲಿಸಿ ಸೂಕ್ತ ಕ್ರಮ ಜರುಗಿಸಲಾಗುವುದು.

---

ಸಂಖ್ಯೆ: ನಅಇ 183 ಮೈಅಪ್ರಾ 2023 (ಇ)

6/07/2023

(ಬಿ.ಎಸ್. ಸುರೇಶ)
ನಗರಾಭಿವೃದ್ಧಿ ಮತ್ತು
ನಗರ ಯೋಜನೆ ಸಚಿವರು